



– 6ನೇ ಪುಟದಿಂದ

ಪೂರ್ತಿ ಅರಳಿದಾಗ ಈಸ್ಟ್‌ಮನ್ ಕಲರ್‌ನಲ್ಲಿ ಕಂಗೊಳಿಸುವ ಈ ಹೂವು. ಕಾಲ ಕ್ರಮೇಣ, 'ಕೆಂಪಾದವೋ.. ಎಲ್ಲಾ.. ಕೆಂಪಾದವೋ..' ಎಂದಾಗುತ್ತದೆ! ಇಳಿ ಯೌವನಾವಸ್ಥೆಯಲ್ಲಿ ಮತ್ತೆ ಗೌರಿ ಲಿಲ್ಲಿ ಅಧೋಮುಖಿ!

## ಹೆಸರಲ್ಲೇನಿದೆ?

ಈ ಹೂವಿನ ಬಣ್ಣಗಳ ಆಟವನ್ನು ನೋಡಿಯೇ ಲಿನೇಯನ್ ಎಂಬ ಖ್ಯಾತ ಸಸ್ಯಶಾಸ್ತ್ರಜ್ಞ, 'ವಾಹ್, ವಾಟ್ ಎ ಗ್ಲೋರಿಯಸ್' ಎಂದನಂತೆ. ಆತನ ಸಹಾಯಕ ಸಹಮತ ವ್ಯಕ್ತಪಡಿಸಿ 'ವಾವ್.. ಸುಪರ್ಬ್' ಎಂದು ದನಿಗೂಡಿಸಿದನಂತೆ. ಹಾಗೆ ಆ ಹೂವಿಗೆ ಶಾಸ್ತ್ರೀಯವಾಗಿಯೇ 'ಗ್ಲೋರಿಯಸ್ ಸುಪರ್ಬ್' ಎಂಬ ಹೆಸರು ಬಂತು!

ಉತ್ತರ ಕನ್ನಡದ ಎಲ್ಲೆಡೆ ವಿಶೇಷವಾಗಿ ಗೌರಿ ಹಬ್ಬದಲ್ಲಿ ದೇವರ ಮುಂದೆ ಈ ಹೂವನ್ನು ಬಳ್ಳಿಯಾಗಿ ಕಟ್ಟುತ್ತಾರೆ. ಇದೇ ಸಮಯದಲ್ಲಿ ಗೌರಿ ಬಳ್ಳಿಯ ಗೆಡ್ಡೆ ತಂದು ಮನೆಯಂಗಳದಲ್ಲಿ ಅಥವಾ ಪಾಟ್‌ಗಳಲ್ಲಿ ಬೆಳೆಸುತ್ತಾರೆ. ಹೂ ತಳೆದು ಬಳ್ಳಿ ಒಣಗಿ– ಗಡ್ಡೆ ಮಣ್ಣಿನಲ್ಲಿ ಹುದುಗಿ ಮತ್ತೆ ಶ್ರಾವಣ ಮಾಸ ಬಂತೆಂದರೆ ಚಿಗುರೊಡೆದು ಹೂಗಳು ಮೈ ತಳೆಯುತ್ತವೆ.

ಗೌರಿ ಹೂವಿಗೆ ದೇಶದ ಹಲವೆಡೆ ವಿಭಿನ್ನ ಹೆಸರುಗಳಿವೆ. ಅಗ್ನಿಶಿಖಾ, ಶಾಲಿಹಾರಿ, ಲಂಗುಲಿಯಾಟ್, ನಂಗುಲಿಕಾ– ಹೀಗೆ! ಜಾವಾ, ಇಂಡೋನೇಷ್ಯಾಗಳಲ್ಲಿ ಇದನ್ನು ಮಲಬಾರ್ ಗ್ಲೋರಿ ಲಿಲ್ಲಿ ಹಾಗೂ ಕೆಂಬಾಂಗ್ ತೆಲಂಗ್ ಎಂದು ಕರೆಯುತ್ತಾರೆ. ಮಲೇಷ್ಯಾ, ಮ್ಯಾನ್ಮಾರ್, ಶ್ರೀಲಂಕಾ, ಬಾಂಗ್ಲಾ ದೇಶಗಳಲ್ಲೂ ಈ ಹೂವು ಜನಪ್ರಿಯ. ನಮ್ಮ ರಾಜ್ಯದಂತೆ ಹಿಮಾಲಯದ ತಪ್ಪಲಲ್ಲೂ ಹೆಚ್ಚಾಗಿ ಕಂಡುಬರುವ ಇದನ್ನು ಮಾವ್ವೆ ಸುಂದರ್, ಪರ್ಪಲ್ ಪ್ರಿನ್ಸ್, ಆರೆಂಜ್ ಓಮ್, ಸಣ್ಮನ್ ಗ್ಲೋ ಮತ್ತು ಆರೆಂಜ್ ಗ್ಲೋ ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಅಂದ ಹಾಗೆ ಇದು ಜಿಂಬಾಬ್ವೆ ದೇಶದ ರಾಷ್ಟ್ರೀಯ ಹೂವು! ದಟ್ಟ ಕಾನನದ ತಪ್ಪಲಲ್ಲಿ ಮತ್ತು ಗದ್ದೆ ಬದುವಿನಲ್ಲಿ, ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ ಪ್ರದೇಶದಲ್ಲಿ ಬೆಳೆಯುವ ಇದು ಫಲವತ್ತತೆ ಇಲ್ಲದ ಮಣ್ಣಿನಲ್ಲೂ ಬದುಕಬಲ್ಲದು. ಐದು ಮೀಟರ್ ಎತ್ತರದವರೆಗೂ ಬೆಳೆಯುವ ಈ ಬಳ್ಳಿಯ ಗೆಡ್ಡೆಯಲ್ಲಿ ಒಂದರಿಂದ ನಾಲ್ಕು ಬಳ್ಳಿಗಳು ಚಿಗುರೊಡೆಯುತ್ತವೆ.

ಈ ಹೂವಿನ ವಿಶೇಷವೆಂದರೆ, ಎಲ್ಲಾ ಭಾಗಗಳೂ ಔಷಧಿ ತಯಾರಿಕೆಯಲ್ಲಿ ಅತ್ಯುತ್ತಮ ಪಾತ್ರ ವಹಿಸುತ್ತವೆ. ಎಲೆಗಳನ್ನು ಕ್ಯಾನ್ಸರ್ ಸಂಬಂಧಿತ ರೋಗಗಳಲ್ಲದೆ, ಅಲ್ಸರ್, ಪೈಲ್ಸ್, ಸ್ಕೋಫುಲಾದ ಚಿಕಿತ್ಸೆಗೆ ಬಳಸುತ್ತಾರೆ. ಎಲೆಯ ರಸವನ್ನು ತಲೆಗೆ ಬಳಿಸಿದರೆ ಹೇನಿನ ಕಾಟ ಇಲ್ಲವಾಗುತ್ತದೆ. ಇದರ ಟ್ಯೂಬರ್ ಕಹಿಯಿಂದ ಕೂಡಿದ್ದು ಅಲ್ಪ ಪ್ರಮಾಣದಲ್ಲಿ ಸೇವಿಸಿದರೆ ಟಾನಿಕ್ ಆಗಿ ಕೆಲಸ ಮಾಡುತ್ತದೆ. ಪ್ರಮಾಣ ಸ್ವಲ್ಪ ಹೆಚ್ಚಾದರೆ ಪ್ರಾಣಾಂತಿಕವಾಗುತ್ತದೆ. ಇದರ ಟ್ಯೂಬರ್‌ನಿಂದ ಬಿಳಿ ಪುಡಿ ತಯಾರಿಸಿ ಅದನ್ನು ಜೇನಿನೊಂದಿಗೆ ಬೆರೆಸಿ, ಗನೋರಿಯಾ, ಲೆಪ್ರಸಿ, ಕರುಳಿನ ಬೇನೆ, ಹೊಟ್ಟೆಯ ಹುಳುಗಳ ಉಪಶಮನಕ್ಕೆ ಬಳಸುತ್ತಾರೆ. ಗರ್ಭಿಣಿಯರಿಗೆ ಹೆರಿಗೆ ನೋವು ಕಾಣಿಸಲು ಹೊಟ್ಟೆಯ ಕೆಳಭಾಗಕ್ಕೆ ಇದರ ಲೇಪವನ್ನು ಹಚ್ಚುತ್ತಾರೆ. ರುಮ್ಯಾಟಿಸಂ, ನರಗಳ ನೋವು, ಚರ್ಮರೋಗಗಳಿಗೆ ಅಲ್ಲದೆ, ತಮಿಳುನಾಡಿನ ಗುಡ್ಡಗಾಡು ಜನರು ವಿಷಪೂರಿತ ಹಾವುಗಳ ಕಡಿತಕ್ಕೂ ಪರಿಹಾರವಾಗಿ ಇದನ್ನೇ ಉಪಯೋಗಿಸುತ್ತಾರೆ. ಫಾರ್ಮಾ ಕಂಪನಿಗಳ ಅತ್ಯಂತ ಬೇಡಿಕೆಯಲ್ಲಿರುವ ಕೋಲಚಿನ್ಸ್, ಕೋಲಚಿಕೂಸೈಡ್ಸ್ ಎನ್ನುವ ಅಮೂಲ್ಯ ದ್ರವ್ಯ ಈ ಹೂವಿನಲ್ಲಿ ಹೇರಳವಾಗಿದೆ.

ಅತಿಯಾದ ಬಳಕೆಯಿಂದ ಗೌರಿ ಹೂವು ವಿನಾಶದ ಅಂಚಿಗೆ ತಲುಪಿದ್ದು, 'ಐ.ಯು.ಸಿ.ಎನ್.ನ 'ರೆಡ್ ಬುಕ್'ನಲ್ಲಿ ನಮೂದಾಗಿದೆ. ಈ ಸಸ್ಯಗಳ ಅಭಿವೃದ್ಧಿ ಮತ್ತು ಸಂರಕ್ಷಣೆ ಇಂದಿನ ಅತಿ ಅಗತ್ಯಗಳಲ್ಲೊಂದು. ಇಂತಹ ಸಾಹಸಕ್ಕೆ ಕೈ ಹಾಕಿದವರು ಎಂ.ಆರ್. ಶೆಟ್ಟಿಯವರು. ಅಂಕೋಲಾ ಸಮೀಪ ಎಕರೆಗಟ್ಟಲೆ ಪ್ರದೇಶದಲ್ಲಿ ಈ ಗೌರಿ ಗಿಡದ ಕೃಷಿಯಲ್ಲಿ ಅವರು ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ.